ಮೇ ಮುಗಿದು ಜೂನ್ ಬಂತೆಂದರೆ ಶಾಲೆ–ಕಾಲೇಜುಗಳ ಆವರಣಗಳಲ್ಲಿ ನೀರವಮೌನ ಬದಿಗೆ ಸರಿದು ಸಡಗರ ಮೈದುಂಬಿಕೊಳ್ಳುತ್ತದೆ. ಆ ಸಂಭ್ರಮಕ್ಕೆ ಪರಿಸರವೂ ಸ್ಪಂದಿಸುವಂತೆ ಜೀವಕಳೆಯನ್ನು ಸೂಸುತ್ತಿರುತ್ತದೆ. ಬೇಸಗೆಯ ಧಗೆಯನ್ನು ತಣಿಸುವಂತೆ ಮಾನ್ಸೂನ್ ಮಾರುತಗಳು ನಾಡನ್ನು ಪ್ರವೇಶಿಸಿ, ಮಳೆಹಾಡಿಗೆ ಮುನ್ನುಡಿ ಬರೆಯುತ್ತವೆ. ಹೊಲ ಗದ್ದೆಗಳಲ್ಲಿ ಬೀಜದ ಕಣ್ಣುಗಳು. ಶಾಲೆಗಳಲ್ಲಿ ಅಕ್ಷರದ ಕಣ್ಣುಗಳು. ಸುಖಬಾಳಿನ ನಾಳೆಗಳಿಗೆ ಅರಿವು ತುಂಬುವ ಅಕ್ಷರಪಾತ್ರೆಯಂತೆ ಶಾಲೆಗಳು ಕಾಣಿಸಿಕೊಂಡರೆ, ಉಸಿರುಣಿಸುವ ಅಕ್ಷಯಪಾತ್ರೆಯಂತೆ ಪರಿಸರ ಕಾಣಿಸುತ್ತದೆ. ಹೊಲಗದ್ದೆಗಳಲ್ಲಿ ಭೂಮಿ ತಾಯಿಯ ಚೊಚ್ಚಿಲ ಮಗನಿಂದ ಬೀಜ ಬಿತ್ತನೆ ನಡೆದರೆ, ಶಾಲೆಗಳಲ್ಲಿ ಎಳೆಯ ಮನಸ್ಸುಗಳಲ್ಲಿ ಶಿಕ್ಷಕರಿಂದ ಅಕ್ಷರ ಬಿತ್ತನೆ.

ಬಡವ–ಶ್ರೀಮಂತ ಎಂಬ ಭೇದಭಾವ ಇಲ್ಲದೆ ಎಲ್ಲ ಪೋಷಕರೂ ತಮ್ಮ ಮಕ್ಕಳ ಬದುಕನ್ನು ಚಂದವಾಗಿಸಲು ಬಿಡುವಿಲ್ಲದೆ ದುಡಿಯುತ್ತಾರೆ. ಅವರವರ ಅನುಕೂಲಕ್ಕೆ ತಕ್ಕಂತಹ ಶಾಲಾ ಕಾಲೇಜುಗಳಿಗೆ ಮಕ್ಕಳನ್ನು ಸೇರಿಸುತ್ತಾರೆ. ತಮ್ಮ ಮಕ್ಕಳು ತಮ್ಮಂತೆ ಆಗದೆ, ಚೆನ್ನಾಗಿ ಓದಿ, ಉನ್ನತ ಸ್ಥಾನಕ್ಕೆ ಏರಲಿ ಎನ್ನುವುದು ಬಹುತೇಕ ಪೋಷಕರ ಬಯಕೆ.

ಹಿಂದೆಲ್ಲ, ‘ಮಕ್ಕಳು ಪಾಸಾದ್ರೆ ಸಾಕು’ ಎಂದು ಪೋಷಕರು ಪ್ರಾರ್ಥಿಸುತ್ತಿದ್ದರು. ಈಗ ಕಾಲ ಬದಲಾಗಿದೆ. ಪಾಸಾದರೆ ಸಾಲದು, ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗುವುದು ಇಂದಿನ ಸ್ಪರ್ಧಾಯುಗದ ಅಗತ್ಯ. ಉನ್ನತ ಶಿಕ್ಷಣ, ವೃತ್ತಿಪರ ಅಧ್ಯಯನ, ಪ್ರತಿಷ್ಠಿತ ಕಾಲೇಜಿನಲ್ಲಿ ಸೀಟು ಪಡೆಯಲು, ಉದ್ಯೋಗ ಪಡೆಯಲು ಉತ್ತಮ ಅಂಕ ಗಳಿಸಲೇಬೇಕು. ಮಕ್ಕಳ ಒಳಿತಿನ ಆಸೆ ಹೊತ್ತು ಶ್ರಮಿಸುವ ಪೋಷಕರ ಕನಸನ್ನು ನೆರವೇರಿಸುವ ಜವಾಬ್ದಾರಿ ವಿದ್ಯಾರ್ಥಿಗಳದು. ಅವರು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಕುಶಲ ಕಲೆಯನ್ನು ಓದಿನಲ್ಲೇ ತೋರಿಸಿ, ಅದನ್ನು ಅಂಕಪಟ್ಟಿಯಲ್ಲಿ ಬಿಂಬಿಸುವ ಸವಾಲನ್ನು ಎದುರಿಸಲೇಬೇಕು.

ಎಸ್ಎಸ್ಎಲ್‌ಸಿ ಹಾಗೂ ಪಿಯುಸಿ ಎಲ್ಲ ಮಕ್ಕಳ ವಿದ್ಯಾರ್ಥಿ ಜೀವನದಲ್ಲಿ ಎದುರಾಗುವ ಎರಡು ಮುಖ್ಯ ಹಂತಗಳು. ಎಸ್ಎಸ್ಎಲ್‌ಸಿಯಲ್ಲಿ ಪಡೆಯುವ ಉತ್ತಮ ಅಂಕಗಳು ಉತ್ತಮ ಪದವಿಪೂರ್ವ ಕಾಲೇಜಿಗೆ ಪ್ರವೇಶ ಪಡೆಯಲು ನೆರವಾಗುತ್ತವೆ; ವಿದ್ಯಾರ್ಥಿಗೆ ಆತ್ಮವಿಶ್ವಾಸವನ್ನೂ ತಂದುಕೊಡುತ್ತವೆ.



**ಹೆಚ್ಚು ಅಂಕ ಗಳಿಸುವುದು ಹೇಗೆ? ಈ ಪ್ರಶ್ನೆಗೆ ಸರಳ ಉತ್ತರ: ಉತ್ತಮ ಪ್ರಯತ್ನವೇ ಉತ್ತಮ ಫಲಿತಾಂಶಕ್ಕೆ ಕೀಲಿಕೈ. ಆದರೆ, ಬರಿಯ ಪ್ರಯತ್ನವಷ್ಟೇ ಯಶಸ್ಸಿಗೆ ಸಾಕಾಗುವುದಿಲ್ಲ. ಹೆಚ್ಚಿನ ಅಂಕಗಳನ್ನು ಪಡೆಯುವುದಕ್ಕೆ ಯೋಜನಾಬದ್ಧ ಪ್ರಯತ್ನ ಅಗತ್ಯ.**

## ಪಠ್ಯಕ್ಕೇ ಇರಲಿ ನಿಷ್ಠೆ...



**ಅನುಪಮಾ ಶ್ರೀಶೈಲ್ ಹಿರೇಹೊಳಿ**
ತಂದೆ: ಶ್ರೀಶೈಲ್ ಹಿರೇಹೊಳಿ
ತಾಯಿ: ರಾಜಶ್ರೀ
ಅಂಕ: 625 (ಎಸ್ಎಸ್ಎಲ್‌ಸಿ)
ವಿದ್ಯಾಸಂಸ್ಥೆ: ‘ಶ್ರೀಕುಮಾರೇಶ್ವರ’ ಇಂಗ್ಲಿಷ್ ಮಾಧ್ಯಮ ಶಾಲೆ, ಸವದತ್ತಿ

**ಗೆದ್ದವರ ಮಾತು**

ಬೆಳಗಾವಿ ಜಿಲ್ಲೆ ಸವದತ್ತಿಯ ‘ಶ್ರೀಕುಮಾರೇಶ್ವರ’ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ನಾನು ಓದಿದ್ದು, 625ಕ್ಕೆ ಅಷ್ಟೂ ಅಂಕಗಳನ್ನು ಪಡೆದ ಖುಷಿ ನನ್ನದು.

ಅಪ್ಪ ಸವದತ್ತಿ ಯಲ್ಲಮ್ಮನ ಗುಡ್ಡದ ದೇವಸ್ಥಾನದಲ್ಲಿ ಟ್ರಸ್ಟಿ ಆಗಿದ್ದರು. ಒಂದು ವರ್ಷದ ಹಿಂದೆ ತೀರಿಕೊಂಡರು. ಅಮ್ಮ ರಾಜಶ್ರೀ, ಸವದತ್ತಿಯ ಎಂ.ಎಂ. ಜೋಷಿ ಕಣ್ಣಿನ ಆಸ್ಪತ್ರೆಯಲ್ಲಿ ಸಹಾಯಕಿಯಾಗಿ ಕೆಲಸ ಮಾಡುತ್ತಿದ್ದಾರೆ. ನಾನೀಗ ಮಂಗಳೂರಿನ ಶ್ರೀ ಚೈತನ್ಯ ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದೇನೆ. ಐಐಟಿಯಲ್ಲಿ ಎಂಜಿನಿಯರಿಂಗ್ ಮಾಡುವ ಕನಸು ಇದೆ.

ಆರಂಭದಲ್ಲಿಯೇ ವೇಳಾಪಟ್ಟಿಯನ್ನು ಹಾಕಿಕೊಂಡು ಓದಲು ಆರಂಭಿಸಿದೆ. ಯಾವ ವಿಷಯಕ್ಕೂ ಟ್ಯೂಷನ್‌ಗೆ ಹೋಗಲಿಲ್ಲ. ಯಾವುದೇ ಗೈಡ್‌ಗಳನ್ನು ಓದಲಿಲ್ಲ. ಪಠ್ಯಪುಸ್ತಕಗಳನ್ನು ಮಾತ್ರ ಚೆನ್ನಾಗಿ ಓದಿದೆ. ಪ್ರತಿ ದಿನ 8ರಿಂದ 10 ಗಂಟೆ ಓದುತ್ತಿದ್ದೆ. ಆನ್‌ಲೈನ್‌ನಲ್ಲಿ ಪ್ರಶ್ನೆಪತ್ರಿಕೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಪ್ರತಿವಾರ ಸ್ವಯಂ ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದೆ. ಮೌಲ್ಯಮಾಪನಕ್ಕೆ ‘ಕೀ ಆನ್ಸರ್’ ನೋಡುತ್ತಿದ್ದೆ. ಏನಾದರೂ ಅನುಮಾನಗಳು ಇದ್ದರೆ ನಮ್ಮ ಸರ್ ಹತ್ತಿರ ಕೇಳುತ್ತಿದ್ದೆ.

ಹೆಚ್ಚಾಗಿ ಪಠ್ಯವನ್ನೇ ಅವಲಂಬಿಸಬೇಕು. ಓದಿದ್ದನ್ನು ಒಮ್ಮೆ ಬರೆಯಬೇಕು. ನಾವು ಸಿದ್ಧ ಮಾಡಿಕೊಂಡ ವೇಳಾಪಟ್ಟಿಗೆ ಸಮಯವನ್ನು ಹೊಂದಾಣಿಕೆ ಮಾಡಿಕೊಳ್ಳುವುದು ಮುಖ್ಯ. ಓದುವಾಗ ಬೇಸರ ಆದರೆ ನನ್ನ ತಮ್ಮ ಬಸವರಾಜನ ಜೊತೆ ಚೆಸ್ ಆಡುತ್ತಿದ್ದೆ.